# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2708 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ದಿನಾಂಕ | : | 25.03.2022 |
| ಉತ್ತರಿಸುವ ಸಚಿವರು | : | ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರ ಸಂಖ್ಯೆ ಎಷ್ಟು; | 2011ರ ಜನಗಣತಿಯಂತೆ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರ ಒಟ್ಟಾರೆ ಜನರ ಸಂಖ್ಯೆ 1,20.219 ಇದ್ದು, ಈ ಪೈಕಿ 59,369 ಪುರುಷರು ಹಾಗೂ 60,850 ಮಹಿಳೆಯರು. |
| ಆ) | ಬುಡಕಟ್ಟು ಜನರಿಗೆ ಇಲಾಖೆಯ ವತಿಯಿಂದ ನೀಡಲಾಗುತ್ತಿರುವ ಉಚಿತ ಮೂಲಭೂತ ಸವಲತ್ತುಗಳಾವುವು; (ವಿವರ ನೀಡುವುದು) | ಬುಡಕಟ್ಟು ಜನಾಂಗದ ಅಭಿವೃದ್ಧಿಗಾಗಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>1. ಶೈಕ್ಷಣಿಕ ಅಭಿವೃದ್ಧಿ<br>2. ಮೂಲಭೂತ ಸೌಕರ್ಯ ಒದಗಿಸುವುದು<br>3. ಆರ್ಥಿಕ ಅಭಿವೃದ್ಧಿ<br>4. ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ<br>5. ಸಾಮಾಜಿಕ ಸಬಲೀಕರಣ<br><br>ಮೂಲನಿವಾಸಿ ಜನಾಂಗದವರಾದ ಜೇನುಕುರುಬ ಜನಾಂಗದವರಲ್ಲಿ ಮನೆ ಇಲ್ಲದವರಿಗೆ ಪ್ರತಿ ಘಟಕ ವೆಚ್ಚ ರೂ.3.50 ಲಕ್ಷಗಳಲ್ಲಿ (ಕೇಂದ್ರದ ಪಾಲು ರೂ.78000/- ಇಲಾಖೆಯಿಂದ ರೂ.97000/- ಉಳಿದ ರೂ.1.75 ಲಕ್ಷಗಳು ರಾಜೀವ್ ಗಾಂಧಿ ಗ್ರಾಮೀಣ ಅಭಿವೃದ್ಧಿ ವಸತಿ ನಿಗಮದಿಂದ) 155 ಮನೆಗಳನ್ನು ನಿರ್ಮಾಣ ಮಾಡಲು ಕ್ರಮ ವಹಿಸಲಾಗಿದೆ.<br><br>ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ವಾಸವಿರುವ 37 ಡೊಂಗ್ರಿಗೆರೆಸಿಯಾ ಜನಾಂಗದ ಕುಟುಂಬಗಳಿಗೆ ರೂ.3.50 ಲಕ್ಷಗಳ ಘಟಕ ವೆಚ್ಚದಲ್ಲಿ ಹೊಸ ಮನೆ ನಿರ್ಮಿಸಲು, ರೂ.25.00 ಲಕ್ಷಗಳ ವೆಚ್ಚದಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಮತ್ತು ರೂ.25.00 ಲಕ್ಷಗಳ ವೆಚ್ಚದಲ್ಲಿ ವಿದ್ಯುತ್‌ಚ್ಛಕ್ತಿ ಸರಬರಾಜು ಮಾಡಲು ಒಟ್ಟಾರೆ ರೂ.179.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಚಾಮರಾಜನಗರ ಜಿಲ್ಲೆಯಲ್ಲಿ ವಾಸಿಸುತ್ತಿರುವ ಜೇನುಕುರುಬ ಹಾಗೂ ಇತರೆ ಪರಿಶಿಷ್ಟ ಜನಾಂಗದವರಾದ ಕಾಡುಕುರುಬ, ಸೋಲಿಗ, ಯರವ ಜನಾಂಗದವರು ಅರಣ್ಯ ಮತ್ತು ಅರಣ್ಯ ಅಂಚಿನಲ್ಲಿ ವಾಸಿಸುತ್ತಿದ್ದು, ಇವರಿಗೆ ಮಳೆಗಾಲದಲ್ಲಿ ಜೀವನ ನಿರ್ವಹಣೆ ತೊಂದರೆಯಾಗಿ ಅಪೌಷ್ಠಿಕತೆಯಿಂದ ಬಳಲುವುದನ್ನು ತಪ್ಪಿಸಲು 45 ದಿನಗಳಿಗೊಮ್ಮೆ ವಾರ್ಷಿಕ ಆರು ಭಾರಿ ಪ್ರತಿ |

<table>
<tr>
<td></td>
<td></td>
<td>
ಕುಟುಂಬಕ್ಕೆ ಈ ಕೆಳಕಂಡ ಆಹಾರ ಪದಾರ್ಥಗಳನ್ನು ಪಡಿತರ ಆಹಾರ ಧಾನ್ಯದ ಜೊತೆಗೆ ಹೆಚ್ಚುವರಿಯಾಗಿ ಉಚಿತವಾಗಿ ನೀಡಲಾಗುತ್ತಿದೆ.
<table>
<tr><th>ಕ್ರ.ಸಂ</th><th>ಆಹಾರ ಧನಗಳ ವಿವರ</th><th>ಪ್ರಮಾಣ</th></tr>
<tr><td>1.</td><td>ಅಕ್ಕಿ/ರಾಗಿ/ಗೋದಿ</td><td>8 ಕೆ.ಜಿ</td></tr>
<tr><td>2.</td><td>ತೊಗರಿಬೇಳೆ</td><td>3 ಕೆ.ಜಿ</td></tr>
<tr><td>3.</td><td>ಕಡಲೆಬೀಜ</td><td>1 ಕೆ.ಜಿ</td></tr>
<tr><td>4.</td><td>ಹೆಸರುಕಾಳು/ಹುರಳಿಕಾಳು/ಹಲಸಂದೆ ಕಾಳು</td><td>2 ಕೆ.ಜಿ</td></tr>
<tr><td>5.</td><td>ಅಡುಗೆ ಎಣ್ಣೆ</td><td>2 ಲೀಟರ್</td></tr>
<tr><td>6.</td><td>ಸಕ್ಕರೆ/ಬೆಲ್ಲ</td><td>2 ಕೆ.ಜಿ</td></tr>
<tr><td>7.</td><td>ಮೊಟ್ಟೆ ತಿಂಗಳಿಗೆ</td><td>30 ನಂ</td></tr>
<tr><td>8.</td><td>ನಂದಿನಿ ತುಪ್ಪ</td><td>1/2 ಕೆ.ಜಿ</td></tr>
</table>
ಬುಡಕಟ್ಟು ಪಂಗಡದವರು ಹೆಚ್ಚು ವಾಸಿಸುತ್ತಿರುವ ಗ್ರಾಮ/ಹಾಡಿಗಳಲ್ಲಿ 8 ಸಂಚಾರಿ ಆರೋಗ್ಯ ಘಟಕಗಳು ಕಾರ್ಯನಿರ್ವಹಿಸುತ್ತಿದೆ.
ಚಾಮರಾಜನಗರ ಜಿಲ್ಲೆಯು ಒಳಗೊಂಡಂತೆ ಬುಡಕಟ್ಟು ಜನರಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ರೂ.18.50 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
ಪ್ರಗತಿ ಕಾಲೋನಿ ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ 2018-19 ರಿಂದ 2021-22ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
2021-22ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಗೆ ವಾಲ್ಮೀಕಿ/ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಬಿಡುಗಡೆಯಾದ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
</td>
</tr>
<tr>
<td>ಇ)</td>
<td>ಸದರಿಯವರ ಮಕ್ಕಳ ವಿದ್ಯಾಭ್ಯಾಸಕ್ಕೆ ಕಲ್ಪಿಸಿರುವ ವಿಶೇಷ ಸೌಲಭ್ಯಗಳಾವುವು; (ವಿವರ ನೀಡುವುದು)</td>
<td>
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಚಾಮರಾಜನಗರ ಜಿಲ್ಲೆಯಲ್ಲಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.
<ol>
<li>ಚಾಮರಾಜನಗರ ಜಿಲ್ಲೆಯಲ್ಲಿ 20 ವಾಲ್ಮೀಕಿ ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, 598 ಬಾಲಕರು ಮತ್ತು ಬಾಲಕಿಯರು 581 ಸೇರಿ ಒಟ್ಟು 1179 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದೆ.</li>
<li>6 ಮೆಟ್ರಿಕ್ ಪೂರ್ವ ಹಾಗೂ 4 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಸೇರಿ ಒಟ್ಟು 10 ವಿದ್ಯಾರ್ಥಿನಿಲಯಗಳು ಚಾಮರಾಜನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬಾಲಕರು 196 ಮತ್ತು ಬಾಲಕಿಯರು 296 ಸೇರಿ ಒಟ್ಟು 492 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದೆ.</li>
</ol>
</td>
</tr>
</table>

| | | |
|---|---|---|
| | | 3. ವಿದ್ಯಾರ್ಥಿನಿಲಯಗಳು ಹಾಗೂ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ, ಸಮವಸ್ತ್ರ, ನೋಟ್/ಲೇಖನ ಸಾಮಗ್ರಿಗಳು, ಶುಚಿ ಕಿಟ್, ಶೂ ಸಾಕ್ಸ್, ಕ್ಷೌರ ವೆಚ್ಚ, ದಿನಪತ್ರಿಕೆ, ಹಾಸಿಗೆ-ಹೊದಿಕೆ, ಕ್ರೀಡಾ ಸಾಮಗ್ರಿಗಳು ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಚಾಮರಾಜ ನಗರ ಜಿಲ್ಲೆಯಲ್ಲಿ 3 ಮೊರಾರ್ಜಿ ದೇಸಾಯಿ, 2 ಕಿತ್ತೂರು ರಾಣಿ ಚನ್ನಮ್ಮ, 1 ಇಂದಿರಾಗಾಂಧಿ ಹಾಗೂ 1 ಏಕಲವ್ಯ ಮಾದರಿ ವಸತಿ ಶಾಲೆಗಳು ಸೇರಿ ಒಟ್ಟು 7 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಬಾಲಕರು 672 ಮತ್ತು ಬಾಲಕಿಯರು 934 ಸೇರಿ ಒಟ್ಟು 1606 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದೆ.<br>ಬುಡಕಟ್ಟು ಆದಿವಾಸಿ ಪಂಗಡಕ್ಕೆ ಸೇರಿದ ಜೇನು ಕುರುಬ ಮತ್ತು ಕೊರಗ ಜನಾಂಗಕ್ಕೆ ಸೇರಿದ 7ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.2,500 ಮತ್ತು 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.5,000/-ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ. |
| ಈ) | ಬುಡಕಟ್ಟು ಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಪೂರ್ಣವಾಗಿ ಸರ್ಕಾರ ಉಚಿತ ಶಿಕ್ಷಣ ವ್ಯವಸ್ಥೆ ಕಲ್ಪಿಸುವುದೇ; | ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 20 ವಾಲ್ಮೀಕಿ ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, 01 ರಿಂದ 5ನೇ ತರಗತಿಯವರೆಗೆ ನಡೆಸಲಾಗುತ್ತಿದ್ದು. ಸದರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಮುಂದುವರೆದು, ಪರಿಶಿಷ್ಟ ವರ್ಗಗಳ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 5ನೇ ತರಗತಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ 6ನೇ ತರಗತಿಗೆ ಪ್ರವೇಶ ಪರೀಕ್ಷೆ ಇಲ್ಲದೆ ಹಾಗೂ ನೇರವಾಗಿ 7, 8 ಮತ್ತು 9ನೇ ತರಗತಿಗಳಲ್ಲಿ ಖಾಲಿ ಇರುವ ಎಲ್ಲಾ ಸೀಟುಗಳನ್ನು ಮೀಸಲಾತಿಯನ್ವಯ ಆಯಾ ವರ್ಗದ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಸಕಇ 30 ಮೋದೇಶಾ 2017, ದಿನಾಂಕ:02.02.2017ರ ಆದೇಶದಲ್ಲಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.<br>2017-18ನೇ ಸಾಲಿನಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಎಲ್ಲಾ ತರಗತಿಗಳ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯವನ್ನು ನಿಗದಿತ ಸಂಸ್ಕರಣಾ ಶುಲ್ಕ ಮತ್ತು ಅಪಘಾತ ಪರಿಹಾರ ನಿಧಿ ಶುಲ್ಕ/ ಪ್ರಸ್ತುತ ರೂ. 150/-ಗಳನ್ನು ಮಾತ್ರ ಪಾವತಿಸಬೇಕಿರುತ್ತದೆ. |
| ಉ) | ಸದರಿ ಬುಡಕಟ್ಟು ಜನರಿಗೆ ಓಡಾಡಲು ಉಚಿತ ಬಸ್ ಪಾಸ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ; | ಸದರಿ ಬುಡಕಟ್ಟು ಜನರಿಗೆ ಓಡಾಡಲು ಬಸ್ ಪಾಸ್ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ. ಪ್ರಸ್ತುತ ಇಂತಹ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ. |

| | | |
|---|---|---|
| ಊ) | ಕೊರತೆ ಇರುವ ಮೂಲಭೂತ ಸೌಲಭ್ಯಗಳನ್ನು ಯಾವ ಕಾಲಮಿತಿಯಲ್ಲಿ ಕಲ್ಪಿಸಲಾಗುವುದು? | ಪರಿಶಿಷ್ಟ ಪಂಗಡಗಳ ವಿವಿಧ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳಡಿ ಸರ್ಕಾರ ನಿಗಧಿಪಡಿಸಿದ ಅನುದಾನದಲ್ಲಿ ಕೊರತೆ ಇರುವ ಮೂಲಭೂತ ಸೌಲಭ್ಯಗಳನ್ನು, ಅನುದಾನ ಲಭ್ಯತೆಗನುಗುಣವಾಗಿ ಆಧ್ಯತೆಯ ಮೇರೆಗೆ ಹಂತ ಹಂತವಾಗಿ ಒದಗಿಸಲು ಕ್ರಮ ವಹಿಸಲಾಗುವುದು. |

ಸಕಇ 220 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ -1

**2018-2019 ರಿಂದ 2021-2022ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಗೆ ಪ್ರಗತಿ ಕಾಲೋನಿ ಯೋಜನೆಯಡಿ ಮಂಜೂರಾತಿ/ಬಿಡುಗಡೆ ಮಾಡಿದ ಅನುದಾನದ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಕ್ಷೇತ್ರ | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ | ಮಂಜೂರಾತಿ ನೀಡಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ಬಾಕಿ ಬಿಡುಗಡೆ ಮಾಡಬೇಕಾದ ಮೊತ್ತ |
|---|---|---|---|---|---|---|
| 2018-19 | | | | | | |
| 1 | ಚಾಮರಾಜನಗರ | ಹನೂರು | ಸರ್ಕಾರದ ಆದೇಶ ಸಂಖ್ಯೆ:ಸಕಇ-375:ಎಸ್‌ಡಿಸಿ-2018, ದಿ:23/11/2018. | 50.00 | 50.00 | 0.00 |
| | | ಚಾಮರಾಜನಗರ | | 50.00 | 50.00 | 0.00 |
| | | ಕೊಳ್ಳೇಗಾಲ(ಪ.ಜಾ) | | 50.00 | 50.00 | 0.00 |
| | | ಹನೂರು | ಸರ್ಕಾರದ ಆದೇಶ ಸಂಖ್ಯೆ:ಸಕಇ 370 ಎಸ್‌ಎಲ್‌ಪಿ 2018, ದಿ:05/02/2019 | 30.00 | 30.00 | 0.00 |
| | | ಚಾಮರಾಜನಗರ | | 30.00 | 30.00 | 0.00 |
| | | ಗುಂಡ್ಲುಪೇಟೆ | | 15.00 | 15.00 | 0.00 |
| | ಒಟ್ಟು | | | 225.00 | 225.00 | 0.00 |
| 2019-20 | | | | | | |
| 1 | ಚಾಮರಾಜನಗರ | ಕೊಳ್ಳೇಗಾಲ | ಸರ್ಕಾರದ ಆದೇಶ ಸಂಖ್ಯೆ:ಸಕಇ 117 ಪವಯೋ 2019 ಬೆಂಗಳೂರು ದಿನಾಂಕ:25/04/2019 | 10.00 | 10.00 | 0.00 |
| | | ಕೊಳ್ಳೇಗಾಲ | ಸರ್ಕಾರದ ಆದೇಶ ಸಂಖ್ಯೆ:ಸಕಇ 143 ಎಸ್.ಟಿ.ಪಿ 2019 ದಿನಾಂಕ:10/12/2019 | 50.00 | 15.00 | 35.00 |
| | | ಹನೂರು | ಸರ್ಕಾರದ ಪತ್ರ ಸಂಖ್ಯೆ:ಸಕಇ 102 ಎಸ್‌ಟಿಪಿ 2020 (02) ಬೆಂಗಳೂರು, ದಿನಾಂಕ:20.03.2020 | 100.00 | 30.00 | 70.00 |
| | ಒಟ್ಟು | | | 160.00 | 55.00 | 105.00 |
| 2020-21 | | | | | | |
| 1 | ಚಾಮರಾಜನಗರ | ಕೊಳ್ಳೇಗಾಲ | ಸರ್ಕಾರದ ಆದೇಶ ಸಂಖ್ಯೆ:ಸಕಇ 389 ಎಸ್.ಎಲ್.ಪಿ 2020 ದಿ:12.02.2021 | 100.00 | 30.00 | 70.00 |
| | ಒಟ್ಟು | | | 100.00 | 30.00 | 70.00 |
| 2021-22 | | | | | | |
| 1 | ಚಾಮರಾಜನಗರ | ಯಳಂದೂರು | ಸರ್ಕಾರದ ಆದೇಶ ಸಂಖ್ಯೆ:ಸಕಇ 372 ಎಸ್‌ಟಿಪಿ 2021, ಬೆಂಗಳೂರು ದಿ:13.01.2022 | 671.20 | 0.00 | 671.20 |
| | ಒಟ್ಟು | | | 671.20 | 0.00 | 671.20 |
| | ಒಟ್ಟಾರೆ | | | 1156.20 | 310.00 | 846.20 |

## ಅನುಬಂಧ-2

## 2021-22ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಗೆ ವಾಲ್ಮೀಕಿ/ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಬಿಡುಗಡೆಯಾದ ಅನುದಾನದ ವಿವರ

| ಕ್ರ. ಸಂ | ಜಿಲ್ಲೆ | ವಿಧಾನಸಭಾ ಕ್ಷೇತ್ರ | ಸರ್ಕಾರದ ಆದೇಶ/ದಿನಾಂಕ | ಮಂಜೂರಾದ ಸ್ಥಳ | ನಿಗಧಿ (ರೂ.ಲಕ್ಷಗಳಲ್ಲಿ) | ಬಿಡುಗಡೆ |
|---|---|---|---|---|---|---|
| 1 | ಚಾಮರಾಜನಗರ | ಚಾಮರಾಜನಗರ | ಸರ್ಕಾರದ ಆದೇಶ ಸಂಖ್ಯೆ:ಸಕಇ 382 ಎಸ್‌ಟಿಪಿ 2020 ದಿನಾಂಕ:23.03.2021 & ಪವಕನಿ/ಸಂವಿ/ಸಿಆರ್.02/2020-21 ದಿನಾಂಕ:23.06.2021 | ಟೌನ್ ವಾರ್ಡ್ ನಂ-19 | 25.00 | 6.25 |
| 2 | | ಕೊಳ್ಳೇಗಾಲ | ಸಕಇ 442 ಎಸ್‌ಟಿಪಿ 2021 ದಿನಾಂಕ: 25.01.2022 & ಪವಕನಿ:ಸಂವಿ:ಸಿಆರ್.21/2021-22 ದಿ:29.01.2022 | ಹೊಸಮಾಲಂಗಿ | 42.50 | 42.50 |
| 3 | | ಯಳಂದೂರು | ಸಕಇ 247 ಎಸ್‌ಟಿಪಿ 2021. ದಿನಾಂಕ: 07.01.2022 | ಯರಗಂಬಳ್ಳಿ (ಮುಂದುವರೆದ ಕಾಮಗಾರಿ) | 25.00 | 0.00 |
| | | | ಒಟ್ಟು | | 92.50 | 48.75 |